
ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಮೂಡುತ್ತಿದ್ದುವು. ಮಕ್ಕಳನ್ನು ಹದಮಾಡುವಲ್ಲಿ ನಾವೆಲ್ಲಾದರೂ ಎಡವಿದ್ದೇವೋ ಎಂಬ ಆತಂಕವೂ ಉಂಟಾಯಿತು. ಈ ಪ್ರಶ್ನೆಗಳನ್ನೇ ಆಧರಿಸಿ ಒಂದಷ್ಟು ಆತ್ಮಾವಲೋಕನ ಮತ್ತು ಚಿಂತನೆ ಮಾಡುವ ಅಗತ್ಯವಿದೆ ಅಂತ ಅನ್ನಿಸಿತು.

ಒಂದೊಮ್ಮೆ ನನ್ನ ಬಳಿ ಹೆತ್ತವರು ತಮ್ಮ ಮಗನನ್ನು ಕರೆದುಕೊಂಡು ಬಂದಿದ್ದರು. ಅನೇಕ ವರ್ಷಗಳ ದಾಂಪತ್ಯದ ನಂತರ ಅವರಿಗೆ ಮಗ ಹುಟ್ಟಿದ್ದ! ಆತನ ಸಮಸ್ಯೆ ಏನೆಂದರೆ, ಆತ ಶಾಲೆಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಅಥವಾ ಹೋಗಲೇಬೇಕಾದರೆ, ಆತನಿಗೆ ಆತನ ಜೊತೆ ಅಮ್ಮ ಹೋಗಲೇಬೇಕು. ಇಲ್ಲದಿದ್ದರೆ, ಆತ ಅತ್ತು, ಹಟ ಮಾಡಿ ರಂಪ ಮಾಡುತ್ತಿದ್ದ. ತಂದೆ ಕೆಲಸದ ನಿಮಿತ್ತ ಮುಂಬೈಯಲ್ಲಿದ್ದು, ವಾರಕ್ಕೊಮ್ಮೆ ಬೆಂಗಳೂರಿನ ಮನೆಗೆ ಬರುತ್ತಾರೆ. ಬಂದಾಗ, ಮಗನ ಮೇಲಿನ ಮೋಹದಿಂದ ಆತ ಕೇಳಿದ್ದನ್ನೆಲ್ಲಾ ಕೊಡಿಸುತ್ತಿದ್ದಾರೆ. ಆತ ಹೇಳಿದ ಹಾಗೆ ಕುಣಿಯುತ್ತಿದ್ದಾರೆ. ಮನೆಯಲ್ಲೇ ಇರುವ ಅಮ್ಮನ ಜೊತೆಗೂ ಅವನಿಗೆ ಸಲಿಗೆ. ಮನೆಯಲ್ಲಿ ಯಾವುದಕ್ಕೂ ಕಡಿಮೆ ಇಲ್ಲ. ಹಾಗಾದಾಗ ತಾನು ಏನು ಮಾಡಿದರೂ ಅಥವಾ ಏನೂ ಮಾಡದಿದ್ದರೂ ಕೂತು ತಿನ್ನಬಹುದು ಎಂಬಂತಹ ಭಾವ ಮಗುವಿಗೆ ಬಾರದಿರಬಹುದೇ? ಇಂತಹ ಪರಿಸ್ಥಿತಿಯಲ್ಲಿ ನಾವು ಮಗುವನ್ನು ದೂರಬೇಕೋ ಅಥವಾ ಹೆತ್ತವರನ್ನು ದೂರಬೇಕೋ?

ಇನ್ನೊಂದು ಕಾರ್ಯಕ್ರಮಕ್ಕೆ ಹೋದಲ್ಲಿ, ಒಬ್ಬ ತಾಯಿ ತನ್ನ ಮಗುವನ್ನು ಕರೆದುಕೊಂಡು ಬಂದಿದ್ದರು. ಒಳ್ಳೆಯದೇ. ಮಕ್ಕಳನ್ನು ಹೊರಗೆ ನಡೆಯುವಂತಹ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗಬೇಕು. ಆಗ ಅವರಿಗೆ ಹೊರಗಿನ ಜನರ ಜೊತೆಗೆ ಬೆರೆಯುವುದಕ್ಕೆ ಅವಕಾಶ ಸಿಗುತ್ತದೆ. ತನ್ಮೂಲಕ ಅವರು ಅನೇಕ ವಿಚಾರಗಳನ್ನು ಕಲಿಯುತ್ತಾರೆ. ಹಾಗಂತ ಹಾಗೆ ಹೋದಲ್ಲಿ ಮಗು ದಾಂಧಲೆ ಮಾಡುತ್ತದೆ ಅಂತ ಅದನ್ನು ಹಾಗೆಯೇ ಒಪ್ಪಿಕೊಳ್ಳಬಹುದೇ? 8 ಅಥವಾ 9 ವರ್ಷದ ಪೋರ ಕಿರುಚಾಡುತ್ತಿದ್ದ. ಸ್ಟೇಜ್ ಹತ್ತಿ ಮೈಕ್ ಹಿಡಿದು ಏನೋ ಬಾಯಿಗೆ ಬಂದ ಹಾಗೆ ಒದರುತ್ತಿದ್ದ. ಮತ್ತು ಆತನ ವರ್ತನೆಯಿಂದ ಅಲ್ಲಿ ತುಂಬಾ ತೊಂದರೆ ಆಗುತ್ತಿದ್ದರೂ ಆತನ ತಾಯಿ ಆತನನ್ನು ನಿಯಂತ್ರಣದಲ್ಲಿಟ್ಟುಕೊಳ್ಳದೆ, ಆತನಿಗೆ ಆಲಸ್ಯವಾಗುತ್ತಿದೆ, ಹಸಿವಾಗುತ್ತಿದೆ ಅಂತೆಲ್ಲಾ ಸಮಜಾಯಿಷಿ ಕೊಡುತ್ತಿದ್ದಳು. ಇಂತಹ ಸಂದರ್ಭಗಳಲ್ಲಿ ಯಾರದ್ದು ತಪ್ಪು ಅಂತ ನಿರ್ಣಯಿಸಬೇಕು? ಅದರ ಜೊತೆಗೆ ಒಬ್ಬಾಕೆ ಹೇಳಿದರು 'ನಾವು ಸಣ್ಣವರಿದ್ದಾಗ ಮೈಕ್ ಹಿಡಿಯುವುದಕ್ಕೆ ಕೈ ನಡುಗುತ್ತಾ ಇರುತ್ತಿತ್ತು. ಈಗಿನ ಮಕ್ಕಳಿಗೆ ಎಂತಹ ಧೈರ್ಯ!?'

ಬಹುಶಃ ಈಗಿನ ವಯಸ್ಕರು ಎಡವಿದ್ದು ಇಲ್ಲಿಯೇ ಅಂತ ಅನ್ನಿಸುತ್ತದೆ. ತಮಗೆ ಬಾಲ್ಯದಲ್ಲಿ ಸಾಧ್ಯವಾಗದ್ದನ್ನು ಈಗಿನ ಮಕ್ಕಳು ಮಾಡಿ ತೋರಿಸಿದಾಗ, ಅದು ಅವರಿಗೆ ಅದ್ಭುತವಾದ ಅನುಭವವನ್ನು ಕೊಡುತ್ತದೆ. ಉದಾಹರಣೆಗೆ ನನ್ನ ಬಾಲ್ಯದಲ್ಲಿ ಇನ್ನೊಬ್ಬ ಸಣ್ಣ ಹುಡುಗ ಕಂಪ್ಯೂಟರ್ ಬಳಸುತ್ತಾನೆ ಅನ್ನುವುದೇ ಒಂದು ದೊಡ್ಡ ಸುದ್ದಿಯಾಗಿತ್ತು. ಅವನನ್ನು ಅನೇಕ ಹಿರಿಯರು, ಗಣ್ಯವ್ಯಕ್ತಿಗಳು ಹೋಗಿ ಭೇಟಿ ಮಾಡಿ, ಆತನಿಗೆ ಒಂದಷ್ಟು ಕೊಡುಗೆಗಳನ್ನೂ ಕೊಟ್ಟಿದ್ದರು. ಆದರೆ, ಕ್ರಮೇಣ ಕಂಪ್ಯೂಟರ್ ಬಳಕೆ ಸಾಮಾನ್ಯವಾಯಿತು. ಅಂತೆಯೇ, ಮೊಬೈಲ್ ಬಳಕೆಯೂ ಕೂಡ! ಆರಂಭದ ದಿನಗಳಲ್ಲಿ ಅದ್ಭುತವೆಂದೆನಿಸಿದ್ದ ಕೌಶಲ್ಯ ಈಗ ಅನೇಕರ ಮನೆಗಳಲ್ಲಿ ಶೂಲವಾಗಿ ಪರಿಣಮಿಸಿದೆ. ಮಕ್ಕಳು ಮೊಬೈಲ್ ಇಲ್ಲದೇ ಊಟ ಮಾಡುವುದಿಲ್ಲ ಅನ್ನುವ ಪರಿಸ್ಥಿತಿಗೆ ತಲುಪಿದೆ. ಅದೇ ವಿಸ್ತರಿಸಿ ಅನೇಕ ಮಕ್ಕಳ ವರ್ತನೆಗಳಲ್ಲೂ ಉದ್ಧಟತನ ಕಂಡುಬರುತ್ತಿದೆ. ಹಿರಿಯರಿಗೆ






ಗೌರವ ಕೊಡುವ ಬದಲು ಅವರೊಂದಿಗೆ ಹಗುರವಾಗಿ ಮಾತನಾಡುವ ವರ್ತನೆಯನ್ನು ಕಾಣಬಹುದು. ಅನೇಕರು ಅದನ್ನು ಆತ್ಮವಿಶ್ವಾಸ ಅಂತ ಬಣ್ಣ ಕೊಟ್ಟರೂ, ಅದು ಉಡಾಫೆ ಎಂಬುದು ಕಣ್ಣಿಗೆ ರಾಚುತ್ತದೆ.

ಹಾಲಿವುಡ್‌ನ ಶ್ರೇಷ್ಠ ನಟ ಜಾಕಿಚಾನ್ ಒಂದು ಸಂದರ್ಶನದಲ್ಲಿ ಈಗಿನ ತಲೆಮಾರಿನಲ್ಲಿ ಬಂದಿರುವ ಬದಲಾವಣೆಗಳ ಕುರಿತು ಬಹಳ ಮಾರ್ಮಿಕವಾಗಿ ಹೀಗೆ ಹೇಳುತ್ತಾರೆ. 'ಹಿಂದೆ ನಾನು ಸಣ್ಣವನಿರುವಾಗ ನನ್ನ ತಂದೆ ಕೆಲಸ ಮುಗಿಸಿ ಮನೆಗೆ ಬಂದಾಗ, ನಾನು ಎದ್ದು ಹೋಗಿ ಅವರ ಬ್ಯಾಗನ್ನು ತೆಗೆದುಕೊಂಡು, ಅವರಿಗೆ ಶೂ ಬಿಚ್ಚಲು ಸಹಾಯ ಮಾಡುತ್ತಿದ್ದೆ. ಕುಡಿಯುವುದಕ್ಕೆ ಏನಾದರೂ ಬೇಕಾದರೆ ಅದನ್ನು ತಂದುಕೊಟ್ಟು ಸತ್ಕರಿಸುತ್ತಿದ್ದೆ. ಆದರೆ ಈಗ ನಾನು ಮನೆಗೆ ಮರಳುವಾಗ ನನ್ನ ಮಗ ಸೋಫಾದ ಮೇಲೆ ಕುಳಿತು ಟಿವಿಯೋ ಮೊಬೈಲೋ ನೋಡುತ್ತಿರುತ್ತಾನೆ. ನನ್ನನ್ನು ನೋಡಿ ಕೂತಲ್ಲಿಂದಲೇ 'ಹಾಯ್ ಡ್ಯಾಡ್' ಅಂತ ಹೇಳುತ್ತಾನೆ. ಕೂತಲ್ಲಿಂದ ಕದಲುವುದೂ ಇಲ್ಲ' ಅಂತ.

ಇದು ಅನೇಕ ಮನೆಗಳಲ್ಲಿ ಕಾಣಸುತ್ತಿರುವಂತಹ ಪಿಡುಗೇ! ಆದರೆ, ಈಗ ತಂದೆ ತಾಯಿಯರಾಗಿರುವ ಅನೇಕರು ತಮ್ಮ ಬಾಲ್ಯದಲ್ಲಿದ್ದ ಕೊರತೆಗಳು ತಮ್ಮ ಮಕ್ಕಳಿಗೆ ಬರಬಾರದು ಎಂಬ ಕಾರಣಕ್ಕೆ ಅವರು ಕೇಳಿದ್ದನ್ನೆಲ್ಲಾ ತೆಗೆದುಕೊಡುತ್ತಾರೆ. ಒಂದೊಮ್ಮೆ